**ಅ.ದಾ. ನಂಃ 64-2012** **ಡಿ .ಡಬ್ಲ್ಯೂ. 1**

ಸಾಕ್ಷಿದಾರರ ಹೆಸರು ಸುರೇಶ್ ಪಡವಾಳಕರ್

ವಾಸ್ತವ್ಯ ಕಾರವಾರ

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 11-10-2018

***ಪಾಟೀ ಸವಾಲುಃ - ಶ್ರೀ ಆರ್.ಎಸ್.ಹೆಚ್ ಗಾಳಿ ವಕೀಲರಿಂದಃ-***

ದಾವಾ ಆಸ್ತಿಗಳು ಪಿರ್ತಾರ್ಜಿತ ಆಸ್ತಿ ಎಂದರೆ ಸರಿ. ನನ್ನ ಅಜ್ಜನ ಹೆಸರು ಇರಾ ರಾಮಾ ಕಲ್ಗುಟ್ಕರ್. ಅಜ್ಜನ ತಂದೆಯ ಪೂರ್ತಿ ಹೆಸರು ನನಗೆ ಗೊತ್ತಿಲ್ಲ. ಅಜ್ಜನ ತಂದೆಯಿಂದ ಅಜ್ಜನಿಂದ ತಂದೆಗೆ ಹಾಗೆ ತಲೆಮಾರಿನಿಂದ ಬಂದ ಆಸ್ತಿ ಎಂದರೆ ಸರಿ. ನನ್ನ ಅಜ್ಜಿ ಸಾವಿತ್ರಿಯವರ ಹೆಸರು ಹಾಗೂ ಮಕ್ಕಳ ಪರವಾಗಿ ಕುಟುಂಬದ ಮ್ಯಾನೇಜರ್ ನಾತೆಯಿಂದ ಕಂದಾಯ ಇಲಾಖೆಯ ದಾಖಲಾತಿಗಳಲ್ಲಿ ನಮೂದು ಆಗಿತ್ತು ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಯಾರು ಯಾರಿಗೆ ಪಾಲು ಇದೆ ಎಂದು ಹೇಳಲು ಬರುತ್ತದೆಯೋ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ಪ್ರಕಾರ ನನ್ನದೇ ಆಸ್ತಿಗಳು ಎಂದು ಹೇಳಬಹುದೇ ಎಂದರೆ 13ಎ ಮತ್ತು ಬಿ ಆಸ್ತಿಗಳು ಹಾಗೂ ಇನ್ನು 2 ಆಸ್ತಿಗಳು ನನ್ನ ಆಸ್ತಿಗಳು ಎಂದು ಸಾಕ್ಷಿಯು ನುಡಿಯುತ್ತಾರೆ. ಉಳಿದ ಆಸ್ತಿಗಳಲ್ಲಿ ನನಗೆ ಹಕ್ಕಿಲ್ಲ ಎಂದು ನಾನು ಹೇಳುತ್ತೇನೆಯೇ ಎಂದರೆ ಮಾಜಾಳಿ ಮೆಡಿಶಿಟ್ಟಾದಲ್ಲಿದ್ದ ಆಸ್ತಿಗಳಲ್ಲಿ ಹಕ್ಕಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ಮರಣ ಶಾಸನವನ್ನು ಯಾವ ದಿನಾಂಕದಂದು ಬರೆದರು ಎಂದರೆ ದಿನಾಂಕ ನಿಖರವಾಗಿ ನೆನಪಿಲ್ಲ. ಆದರೆ 1980 ರಲ್ಲಿ ಬರೆದಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ನನ್ನ ಅಜ್ಜಿ ಸಾವಿತ್ರಿ 1983 ರಲ್ಲಿ ತೀರಿಕೊಂಡರು. ಅವರಿಗೆ ಅಂದಾಜು 69 ರಿಂದ 70 ವರ್ಷ ವಯಸ್ಸಾಗಿತ್ತು. ಅವರಿಗೆ ಕನ್ನಡ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ಸರಿ. ವಿಲ್‌ನಾಮೆಯನ್ನು ಯಾರು ಎಲ್ಲಿ ಬರೆದರು ಎಂದು ಹೇಳಲು ಬರುತ್ತದೆಯಾ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಬರೆದಿದ್ದರು ಎಂದು ಸಾಕ್ಷಿಯು ನುಡಿಯುತ್ತಾರೆ. ಎಷ್ಟು ಮೊತ್ತದ ಬಾಂಡ್ ಪೇಪರ್ ಮೇಲೆ ಬರೆದರು ಎಂದು ಗೊತ್ತಿದೆಯೇ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ಸಾವಿತ್ರಿಗೆ ಒಬ್ಬನೇ ಗಂಡು ಮಗ ಹಾಗೂ 3 ಜನ ಹೆಣ್ಣುಮಕ್ಕಳು. ರಾಮಾ ಇವರು ಜಾನಕಿ ಅವರ ಗಂಡ. ಯಮುನಾ , ವಿಟಾಬಾಯಿ ಮತ್ತು ನನ್ನ ತಾಯಿ ಯಶೋಧಾಬಾಯಿ ಯಾನೆ

ಆವಡು ಇವರು ಸಾವಿತ್ರಿಯವರ ಹೆಣ್ಣು ಮಕ್ಕಳು. ಎಲ್ಲರು ಮದುವೆಯಾಗಿ ಅವರ ಅವರ ಗಂಡನ ಮನೆಯಲ್ಲಿ ಇದ್ದಾರೆ. ಎಲ್ಲರಿಗೂ ಗಂಡನ ಕಡೆಯಿಂದ ಆಸ್ತಿ ಇದೆ ಎಂದರೆ ಸಾಕ್ಷಿಯು ಯಮುನಾ ಮತ್ತು ವಿಟಾಬಾಯಿಯವರ ಗಂಡನ ಕಡೆಯಿಂದ ಆಸ್ತಿ ಇದೆ ಅದರೆ ನನ್ನ ತಾಯಿಗೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನನಗೆ 64 ವರ್ಷ ವಯಸ್ಸು. ನನ್ನ ತಾಯಿ ತೀರಿಕೊಂಡು 13 ರಿಂದ 14 ವರ್ಷಗಳಾಯಿತು. ನನ್ನ ತಾಯಿ ತೀರಿಕೊಂಡಾಗ ಅವಳಿಗೆ 69 ವರ್ಷ ವಯಸ್ಸು ಆಗಿತ್ತು. ನಾನು ನನ್ನ ತಾಯಿಯ ಹಿರಿಯ ಮಗ.

ನನ್ನ ಅಜ್ಜಿ ಸಾವಿತ್ರಿಗೆ ಎಲ್ಲಾ ಮಕ್ಕಳ ಮೇಲೆ ಸಮಾನಾಗಿ ಪ್ರೀತಿ ಇತ್ತು ಎಂದರೆ ಸರಿ. ಸಾಯುವ ಸಮಯದಲ್ಲಿ ನನ್ನ ತಾಯಿಯೊಂದಿಗೆ ನನ್ನ ಅಜ್ಜಿ ಇದ್ದರು. ನನ್ನ ಅಜ್ಜಿಯ ವೃದ್ಧಾಪ್ಯದದಿಂದ ಆದ ನ್ಯೂನ್ಯತೆಗಳ ದುರುಪಯೋಗ ಪಡೆದುಕೊಂಡು ನನ್ನ ತಾಯಿ ಮರಣ ಶಾಸನ ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮರಣ ಶಾಸನದ ಆಧಾರದ ಮೇಲೆ ಕೆಲವೊಂದು ದಾವಾ ಆಸ್ತಿಗಳಲ್ಲಿ ನನ್ನ ತಾಯಿಯ ಹೆಸರು ಕಂದಾಯ ಇಲಾಖಾ ದಾಖಾಲತಿಗಳಲ್ಲಿ ನಮೂದು ಆಯಿತು ಎಂದರೆ ಸರಿ. ಆ ಸಮಯದಲ್ಲಿ ವಾದಿಗಾಗಲೀ, ಅಥವಾ ಉಳಿದ ಪ್ರತಿವಾದಿಗಳಿಗಾಗಲೀ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ನೋಟಿಸ್ ನೀಡಿದ ಬಗ್ಗೆ ಯಾವುದಾದರೂ ದಾಖಲಾತಿ ಇದೆಯೇ ಎಂದರೆ ಇಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಅದೇ ರೀತಿ ಕಂದಾಯ ಇಲಾಖಾ ದಾಖಲಾತಿಗಳಲ್ಲಿ ನೊಂದಾಯಿಸಬೇಕಾದಾಗ ಕಂದಾಯ ಇಲಾಖಾ ವತಿಯಿಂದ ವಾದಿಯವರಿಗೆ ಮತ್ತು ಉಳಿದ ಪ್ರತಿವಾದಿಯವರಿಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-8 , 13 ಮತ್ತು 14 ಇವು ಮೋಸದಿಂದ ಮಾಡಿದ ಮ್ಯುಟೇಶನ್ ಎಂಟ್ರಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನ ತಾಯಿಗಾಗಲೀ, ವಾದಿಗಾಗಲೀ, ಅಥವಾ 6 ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ಇರಾ ಮತ್ತು ಸರಸ್ವತಿಯವರ ಅವರ ಮೃತ್ಯುವಿನ ನಂತರ ರಾಮಾ ಮತ್ತು ಆತನ ಮೃತ್ಯುವಿನ ನಂತರ 7 ನೇ ಪ್ರತಿವಾದಿಯಾದ ಜಾನಕಿಗೆ ಮಾತ್ರ ದಾವಾ ಆಸ್ತಿಯಲ್ಲಿ ಹಕ್ಕಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಕಟ್ಟಡ ಅನಧಿಕೃತವಾಗಿ ನೀವು ದಾಖಲೆ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಕಂದಾಯ ಇಲಾಖಾ ದಾಖಲಾತಿಗಳಲ್ಲಿ ಹೆಸರು ನೊಂದಾಯಿತವಾದ ಆಧಾರದ ಮೇಲೆ ನಿಡಿ-10, 11, 12 ದಾಖಲಾತಿಗಳನ್ನು ಮೋಸದಿದಂದ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ.

(ಮರಣ ಶಾಸನದ ಬಗ್ಗೆ ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 7 ನೇ ಪ್ರತಿವಾದಿ ಪರ ವಕೀಲರು ತಮ್ಮ ಪಾಟೀ ಸವಾಲಿನಲ್ಲಿ ಅಳವಡಿಸಿಕೊಂಡಿರುತ್ತಾರೆ.)

ಮರು ವಿಚಾರಣೆ ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)*

*ಓ. ಹೇ. ಕೇ. ಸರಿ ಇದೆ.*

*ಹೆ. ಸಿವಿಲ್ ನ್ಯಾಯಾಧೀಶರು, ಕಾರವಾರ.*